ಓ.ಎಸ್.ನಂ. 01/2016 ಪಿ.ಡಬ್ಲೂಃ 1

ದಿನಾಂಕಃ 22.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಪಾಟೀಸವಾಲು ಶ್ರೀ. ಕೆ.ಕೆ.ಆರ್. ವಕೀಲರಿಂದ :-

2005 ನೇ ಸಾಲಿನವರೆಗೆ ನನ್ನ ಗಂಡ ಭಾರತ್ ಯುನಿವರ್ಸೆಲ್ ಸೊಸೈಟಿಯಲ್ಲಿ ಪ್ರಾಂಶುಪಾಲರು ಹಾಗೂ ಅಧೀಕ್ಷಕರಾಗಿ ಕೆಲಸ ನಿರ್ವಹಿಸಿರುತ್ತಾರೆ. ಸದರಿ ಶಿಕ್ಷಣ ಸಂಸ್ಥೆಯಿಂದ ನನ್ನ ಗಂಡ ಕೆಲಸ ಮಾಡಿದ ಬಗ್ಗೆ ಪ್ರತಿಫಲ ಪಡೆದಿರುತ್ತಾರೆ ಎಂದರೆ ಹೌದು. ನನ್ನ ಗಂಡ ಭಾರತ್ ಯುನಿವರ್ಸೆಲ್ ಸೊಸೈಟಿಯಲ್ಲಿ ನೌಕರರು ಹಾಗೂ ಆಡಳಿತ ಮಂಡಳಿಯಲ್ಲಿ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ನನ್ನ ಗಂಡ ಆಡಳಿತ ಮಂಡಳಿಯಲ್ಲಿ ಸದಸ್ಯರಾಗಿದ್ದ ಬಗ್ಗೆ ಸರ್ಕಾರದಿಂದ ಅನುಮತಿ ಪಡೆದಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. 1999 ರಿಂದ 2005 ರವರೆಗೆ ಪಿಯು ತರಗತಿಗಳು ಒಂದು ವರ್ಷ ನಡೆದಿರಬಹುದು. ಹೈಸ್ಕೂಲ್ ನಡೆದಿರಲಿಲ್ಲ ಆದರೆ ಶಿಕ್ಷಕರ ತರಬೇತಿ ಸಂಸ್ಥೆ ನಡೆಯುತ್ತಿತ್ತು. ನನ್ನ ತಂದೆ ಮೃತ ರೇಣುಕರಾಧ್ಯ ಭಾರತ್ ಯುನಿವರ್ಸೆಲ್ ಸೊಸೈಟಿಯಲ್ಲಿ ಉಪಾಧ್ಯಕ್ಷರು ಹಾಗೂ ಕಾರ್ಯಕಾರಿಣಿ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ ಎಂದರೆ ಹೌದು. ನನ್ನ ತಂದೆಯವರು 1998-1999 ನೇ ಸಾಲಿನಿಂದ ಅವರ ಮೃತಪಡುವವರೆಗೆ ಭಾರತ್ ಯುನಿವರ್ಸೆಲ್ ಸೊಸೈಟಿಯಲ್ಲಿ ಉಪಾಧ್ಯಕ್ಷರು ಹಾಗೂ ಕಾರ್ಯಕಾರಿಣಿ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ ಎಂದರೆ ಹೌದು. ನನ್ನ ತಂದೆಯವರು ಭಾರತ್ ಯುನಿವರ್ಸೆಲ್ ಸೊಸೈಟಿಯ ಕಾರ್ಯಕಾರಿಣಿ ಸಭೆ ಪುಸ್ತಕಕ್ಕೆ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಭಾರತ್ ಯುನಿವರ್ಸೆಲ್ ಸೊಸೈಟಿ ಹೆಸರಿನಲ್ಲಿ ಹಳ್ಳಿಮೈಸೂರಿನಲ್ಲಿ ಜಮೀನು ಖರೀದಿ ಮಾಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನನ್ನ ಭಾವ ಶಂಭುಲಿಂಗಪ್ಪ ಭಾರತ್ ಯುನಿವರ್ಸೆಲ್ ಸೊಸೈಟಿ ಹೆಸರಿನಲ್ಲಿ ಜಮೀನು ಖರೀದಿ ಮಾಡಿದ ಕಾಲಕ್ಕೆ ಸರ್ಕಾರಿ ನೌಕರರಾಗಿದ್ದರು ಎಂದರೆ ಇರಬಹುದು ಆದರೆ ನನಗೆ ಗೊತ್ತಿರುವುದಿಲ್ಲ. ಜಮೀನು ಖರೀದಿ ಮಾಡುವ ಕಾಲಕ್ಕೆ ಬಸವರಾಜಯ್ಯನವರು ಸಹಾ ಸರ್ಕಾರಿ ನೌಕರರಾಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಜಮೀನು ಖರೀದಿ ಮಾಡುವ ಸಮಯದಲ್ಲಿ ನನ್ನ ತಂದೆಯವರು ಭಾರತ್ ಯುನಿವರ್ಸೆಲ್ ಸೊಸೈಟಿಯಲ್ಲಿ ಕಾರ್ಯಕಾರಿಣಿ ಸದಸ್ಯರು ಹಾಗೂ ಉಪಾಧ್ಯಕ್ಷರಾಗಿದ್ದರು ಎಂದರೆ ಸಾಕ್ಷಿಯು ಜಮೀನು ಖರೀದಿ

ಮಾಡಿರುವ ವಿಚಾರವೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ಡಿ.ಎಡ್. ವ್ಯಾಸಾಂಗ ಮಾಡುವಾಗ ಭಾರತ್ ಯುನಿವರ್‌ಸೆಲ್ ಸೊಸೈಟಿ ಹಳ್ಳಿಮೈಸೂರಿನಲ್ಲಿ ಕಟ್ಟಡ ಪೂರ್ಣಗೊಂಡಿರಲಿಲ್ಲ. ನಾನು ಡಿ.ಎಡ್. ವ್ಯಾಸಾಂಗ ಮಾಡುವಾಗ ಭಾರತ್ ಯುನಿವರ್‌ಸೆಲ್ ಸೊಸೈಟಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿತ್ತೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಭಾರತ್ ಯುನಿವರ್‌ಸೆಲ್ ಸೊಸೈಟಿಯ ಕಟ್ಟಡಗಳು ಹಳ್ಳಿಮೈಸೂರಿನಲ್ಲಿ ಇದೆ ಎಂದರೆ ಹೌದು. ನಾನು ದಾವಾ ಅನುಸೂಚಿ ಸ್ವತ್ತುಗಳಲ್ಲಿ ತೋರಿಸಿರುವಂತಹ ಸ್ವತ್ತುಗಳಲ್ಲಿ ಕಾಲೇಜು ಕಟ್ಟಡ ಹಾಗೂ ಹಾಸ್ಟೆಲ್ ಕಟ್ಟಡ ಇರುತ್ತದೆ ಎಂದರೆ ಸರಿಯಲ್ಲ. ಕಾಲೇಜು ಕಟ್ಟಡ ಸರ್ವೆ ನಂಬರ್ 43/2 ರಲ್ಲಿರುತ್ತದೆ. ಹಾಸ್ಟೆಲ್ ಕಟ್ಟಡದ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ಭಾರತ್ ಯುನಿವರ್‌ಸೆಲ್ ಸೊಸೈಟಿಯ ಕಟ್ಟಡಗಳು, ಹಾಸ್ಟೆಲ್, ಉದ್ಯಾನವನ, ಹಾಗೂ ಆಟದ ಮೈದಾನ 2 ಎಕರೆ 10 ಗುಂಟೆ ಪ್ರದೇಶದಲ್ಲಿದೆ ಎಂದರೆ ಸರಿಯಲ್ಲ. ಭಾರತ್ ಯುನಿವರ್‌ಸೆಲ್ ಸೊಸೈಟಿಯಲ್ಲಿ ನಾನು ಸಹಾ ಕಾರ್ಯಕಾರಿಣಿ ಸದಸ್ಯೆಯಾಗಿ ಕೆಲಸ ಮಾಡಿರುತ್ತೇನೆ ಎಂದರೆ ಹೌದು. ಯಾವ ವರ್ಷದಿಂದ ಯಾವ ವರ್ಷದವರೆಗೆ ಕೆಲಸ ಮಾಡಿರುತ್ತೇನೆಂದು ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ.

ನನ್ನ ಗಂಡ ಮೃತಪಟ್ಟನಂತರ ಭಾರತ್ ಯುನಿವರ್‌ಸೆಲ್ ಸೊಸೈಟಿಯಲ್ಲಿ ಕಾರ್ಯಕಾರಿಣಿ ಸದಸ್ಯೆಯಾಗಿ ಸೇವೆ ಸಲ್ಲಿಸಿರುತ್ತೇನೆ ಎಂದರೆ ಹೌದು. ನಾನು ಕಾರ್ಯಕಾರಿಣಿ ಸದಸ್ಯೆಯಾಗಿ ಕಾರ್ಯನಿರ್ವಹಿಸಲು ಸರ್ಕಾರದಿಂದ ಅನುಮತಿ ಪಡೆದಿರುತ್ತೇನೆ ಎಂದರೆ ಹೌದು. ನಾನು ಸರ್ಕಾರಕ್ಕೆ ಭಾರತ್ ಯುನಿವರ್‌ಸೆಲ್ ಸೊಸೈಟಿಯಿಂದ ಯಾವುದೇ ಪ್ರತಿಫಲ ಅಪೇಕ್ಷೆಯನ್ನು ಪಡೆಯುವುದಿಲ್ಲ ಎಂದು ಶಪಥ ಪತ್ರ ನೀಡಿರುತ್ತೇನೆ ಎಂದರೆ ಹೌದು. ಸೊಸೈಟಿವಿರುದ್ಧ ಯಾವುದೇ ಕ್ರಿಮಿನಲ್ ಹಾಗೂ ಸಿವಿಲ್ ವ್ಯಾಜ್ಯಗಳನ್ನು ಹೂಡುವುದಿಲ್ಲ ಎಂದು ಶಪಥಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಭಾರತ್ ಯುನಿವರ್‌ಸೆಲ್ ಸೊಸೈಟಿಯಲ್ಲಿ ಕಾರ್ಯಕಾರಿಣಿ ಸದಸ್ಯೆಯಾಗಿದ್ದಾಗ ನಾನು ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಹೌದು. ಭಾರತ್ ಯುನಿವರ್‌ಸೆಲ್ ಸೊಸೈಟಿ ವಿರುದ್ಧ ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ಅನುಮತಿ ಪಡೆದಿರುತ್ತೀರ ಎಂದು ಕೇಳಲಾಗಿ ಸಾಕ್ಷಿಯು ರೇಣುಕರಾಧ್ಯರವರು ದಾವೆಯನ್ನು ಹೂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ರೇಣುಕರಾಧ್ಯರವರ ಕಾನೂನುಬದ್ಧ ವಾರಸುದಾರರಾಗಿ ಈ ಪ್ರಕರಣದಲ್ಲಿ ಸೇರಿದ ನಂತರ ನೀವು ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆದಿರುತ್ತೀರ ಎಂದು ಕೇಳಲಾಗಿ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಭಾರತ್ ಯುನಿವರ್‌ಸೆಲ್ ಸೊಸೈಟಿಯಲ್ಲಿ ಕಾರ್ಯಕಾರಿಣಿ ಸದಸ್ಯೆಯಾದ ನಂತರ ಹಲವಾರು ಗೊತ್ತುವಳಿಗಳನ್ನು ಪಾಸ್ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನಾನು ಕಾರ್ಯಕಾರಿಣಿ ಮಂಡಳಿಯ ಸದಸ್ಯೆಯಾಗಿದ್ದಾಗ ಹೊಳೆನರಸೀಪುರ ಎಸ್.ಬಿ.ಐ. ಬ್ಯಾಂಕಿನಿಂದ ಕಟ್ಟಡ ಅಭಿವೃದ್ದಿಗಾಗಿ ಸಾಲ ಪಡೆದಿರುತ್ತೀರ ಎಂದು ಕೇಳಲಾಗಿ ಸಾಕ್ಷಿಯು ನಾನು ಬ್ಯಾಂಕಿಗೆ ಹೋಗಿ ಸಹಿ ಮಾಡಿರುವುದಿಲ್ಲ. ಕಾರ್ಯದರ್ಶಿಯವರು ಸಾಲ ಪಡೆದಿರಬಹುದು ಎಂದು ಉತ್ತರಿಸುತ್ತಾರೆ. ನಾನು 20.70 ಲಕ್ಷಗಳಿಗೆ ಎಸ್.ಬಿ.ಐ. ಹೊಳೆನರಸೀಪುರ ಭದ್ರತೆ ನೀಡಿರುತ್ತೇನೆ ಎಂದರೆ ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಂದೆಯವರು ಸಹಾ ಎಸ್.ಬಿ.ಐ. ಹೊಳೆನರಸೀಪುರದಲ್ಲಿ 47.50 ಲಕ್ಷಗಳಿಗೆ ವೈಯಕ್ತಿಕ ಭದ್ರತೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಹಾಗೂ ನನ್ನ ತಂದೆಯವರ ಒಪ್ಪಿಗೆ ಮೇರೆಗೆ ಭಾರತ್ ಯುನಿವರ್ಸೆಲ್ ಸೊಸೈಟಿ ಹಳ್ಳಿಮೈಸೂರಿನಲ್ಲಿ ಕಟ್ಟಡ ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಹಾ ಗೊತ್ತುವಳಿಯನ್ನು ಒಪ್ಪಿ ಅಭಿವೃದ್ಧಿ ಸಾಲ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಬ್ಯಾಂಕಿನ ಕಾನೂನು ಸಲಹೆಗಾರರಾಗಿ ಶ್ರೀ. ಆರ್.ಡಿ.ರವೀಶ್ ವಕೀಲರು ಬ್ಯಾಂಕಿಗೆ ಕಾನೂನಾತ್ಮಕ ಸಲಹೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ